# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 43 | Pages. 2 | Date: 11-01-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 43 – ಪುಟಗಳು : 2 | 11-01-2026 | ಭಾನುವಾರ | Ph: 8762954248 | ದರ : ₹1


# ಸರ್ಕಾರ ಒಪ್ಪಿದರೂ ಒಪ್ಪದಿದ್ದರೂ 'ಲಿಂಗಾಯತ' ಧರ್ಮ

## ಸಾಣೇನಹಳ್ಳಿ ಸ್ವಾಮೀಜಿ ಹೇಳಿಕೆ | 26ನೇ ಅರಿವಿನ ಜಾಗೃತಿ ಕಾರ್ಯಕ್ರಮ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಸರ್ಕಾರ ಒಪ್ಪಲಿ ಅಥವಾ ಬಿಡಲಿ ಲಿಂಗಾಯತ ಪ್ರತ್ಯೇಕ ಧರ್ಮವೇ ಎಂದು ತರಳಬಾಳು ಸಾಣೇಹಳ್ಳಿ ಮಠದ ಪೀಠಾಧ್ಯಕ್ಷ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಕಣಕಟ್ಟೆ ಹೋಬಳಿ ಮಾಡಾಳು ಗ್ರಾಮದ ನಿರಂಜನ ಪೀಠದ ಲಿಂಗೈಕ್ಯ ಶ್ರೀ ಚಂದ್ರಶೇಖರ ಸ್ವಾಮೀಜಿ ಅವರ 19ನೇ ಪುಣ್ಯ ಸ್ಮರಣೋತ್ಸವ ಮತ್ತು 26ನೇ ಅರಿವಿನ ಜಾಗೃತಿ ಹಾಗೂ ನೂತನ ವಿದ್ಯಾರ್ಥಿ ನಿಲಯದ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಶ್ರೀಗಳು ಸಮಾಜವನ್ನು ಜಾಗೃತಿಗೊಳಿಸಬೇಕಾದ ಮಠಗಳೇ ಸಮಾಜಕ್ಕೆ ತಪ್ಪು ದಾರಿ ತೋರುತ್ತಿರುವುದು ಬೇಸರದ ಸಂಗತಿ ಎಂದರು.

ನಿಷ್ಠೆ ಮತ್ತು ನಿಷ್ಟುರತೆ ಪ್ರಸ್ತುತ ಸಮಾಜದಲ್ಲಿ ಮರೆಯಾಗುತ್ತಿದೆ. ಬೆಳಕು ನೀಡುವುದಕ್ಕಿಂತ ಬೆಂಕಿ ಹಚ್ಚುವರ ಸಂಖ್ಯೆ ಹೆಚ್ಚಾಗುತ್ತಿದೆ. ಏಕ ನಿಷ್ಠೆಯೇ ಲಿಂಗಾಯತ ಧರ್ಮದ ಮೂಲತತ್ವ ಎಂಬುದನ್ನ ಮರೆಯಬಾರದು.

> ನಾವು ಮಾತನಾಡಿದರೆ ಕೆಲಸ ಮಾಡಲು ಬಿಡಲಿಲ್ಲ ಅಂತಾರೆ, ಅದಕ್ಕೆ ಕಳೆದ ಎರಡೂವರೆ ವರ್ಷದಿಂದ ಏನನ್ನೂ ಮಾತನಾಡಿಲ್ಲ. ಈ ಸರ್ಕಾರದ ಅವಧಿಯಲ್ಲಿ ಜಿಲ್ಲೆಗೆ ಏನೇನು ಅನ್ಯಾಯ ಆಗಿದೆ ಎಂಬುದನ್ನು ಜ. 24ರ ಸಭೆಯಲ್ಲಿ ಜಿಲ್ಲೆಯ ಜನರ ಮುಂದಿಡಲಾಗುವುದು.
>
> **– ಹೆಚ್.ಡಿ.ರೇವಣ್ಣ, ಮಾಜಿ ಸಚಿವ**

ಗಣಾಚಾರದಿಂದ ಮಾತ್ರ ಸ್ಪಷ್ಟತೆ ದೊರೆಯಲಿದೆಯೆಂದು ಲಿಂಗಾಯತ ಧರ್ಮದ ಅನುಯಾಯಿಗಳಿಗೆ ಕರೆ ನೀಡಿದರು.

### ಮಠಾಧೀಶರು ಸಮಾಜ ತಿದ್ದಲಿ

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಮಾತನಾಡಿ, ರಾಜಕಾರಣಿಗಳು ಹಾಗು ಸರ್ಕಾರ ದಾರಿ ತಪ್ಪಿದ ಸಂದರ್ಭದಲ್ಲಿ ಮಠಾಧೀಶರು ಎಚ್ಚರಿಸುವ ಕೆಲಸ ಮಾಡಬೇಕಿದೆ. ಪ್ರಸ್ತುತ ಸನ್ನಿವೇಶದಲ್ಲಿ ಮಠಾಧೀಶರ ಮಾರ್ಗದರ್ಶನ ಅವಶ್ಯಕತೆ ಹೆಚ್ಚಿದೆ ಎಂದರು.

ನಾಡಿನ ಮಠ ಮಂದಿರಗಳು ಶಿಕ್ಷಣ ಕ್ಷೇತ್ರಕ್ಕೆ ಒತ್ತು ನೀಡಿದ್ದರಿಂದ ಬಡ ಮತ್ತು ಮಧ್ಯಮ ವರ್ಗದ ಪ್ರತಿಭಾವಂತ ಮಕ್ಕಳಿಗೆ ಸಹಕಾರಿಯಾಗಿದೆ. ಶೈಕ್ಷಣಿಕವಾಗಿ ರಾಜ್ಯ ಮುಂದಿದೆ ಅಂದರೆ ಅದಕ್ಕೆ ರಾಜ್ಯದ ವಿವಿಧ ಮಠಾಧೀಶರ ಕೊಡುಗೆ ಅಪಾರವಾಗಿದೆ ಎಂದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಮಾತನಾಡಿ, ಲಿಂಗೈಕ್ಯ ಚಂದ್ರಶೇಖರ ಸ್ವಾಮೀಜಿ ಅವರು ಪವಾಡ ಪುರುಷರಾಗಿದ್ದರು. ಅರಸೀಕೆರೆ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಮೊದಲ ಬಾರಿಗೆ ನಾನು ಸ್ಪರ್ಧಿಸಿದ ಸಂದರ್ಭದಲ್ಲಿ ಅವರ ಆಶೀರ್ವಾದ ಪಡೆಯಲು ಮಠಕ್ಕೆ ಆಗಮಿಸಿದಾಗ ಕಣಕಟ್ಟೆ ಹೋಬಳಿಗೆ ನೀರು ತಗೊಂಡು ಬಾರಯ್ಯ ಎಂಬ ಆಶೀರ್ವಾದದೊಂದಿಗೆ ಆದೇಶ ಮಾಡಿದ್ದರು. ಇಂದು ಅವರ ಆಶೀರ್ವಾದ ಫಲಿಸಿದ್ದು ಕಣಕಟ್ಟೆ ಹೋಬಳಿಯ ಕೆರೆಕಟ್ಟೆಗಳಲ್ಲಿ ಹೇಮಾವತಿ ನೀರು ತುಂಬಿರುವುದೇ ಸಾಕ್ಷಿ ಎಂದರು.

ಸಮಾರಂಭದಲ್ಲಿ ಕೆರಗೋಡಿ ರಂಗಾಪುರ ಮಠದ ಗುರು ಪರದೇಶಿ ಕೇಂದ್ರ ಸ್ವಾಮೀಜಿ, ಕೇದಿಗೆ ಮಠದ ಜಯಚಂದ್ರಶೇಖರ ಸ್ವಾಮೀಜಿ, ಪಾಂಡುಮಟ್ಟಿ ವಿರಕ್ತ ಮಠದ ಗುರುಬಸವ ಸ್ವಾಮೀಜಿ, ಕನಕಗಿರಿ ಮಠದ ಚನ್ನಮಲ್ಲ ಸ್ವಾಮೀಜಿ, ಡಿ.ಎಂ.ಕುರ್ಕೆ ಬೂದಿಹಾಳ್ ವಿರಕ್ತಮಠದ ಶಶಿಕರ ಸಿದ್ದ ಬಸವ ಸ್ವಾಮೀಜಿ, ಮಾರ್ಗೊಂಡನಹಳ್ಳಿ ಮಠದ ಅಭಿನವ ಬಸವಲಿಂಗ ಸ್ವಾಮೀಜಿ, ಸಂಸದ ಶ್ರೇಯಸ್ ಪಟೇಲ್, ಸಾಹಿತಿ ಚಟ್ನಳ್ಳಿ ಮಹೇಶ್, ಚಲನಚಿತ್ರ ನಟ ಚೇತನ್, ಕಾಂಗ್ರೆಸ್ ಮುಖಂಡ ಜಿ.ಬಿ.ಶಶಿಧರ್ ಮಾತನಾಡಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಂ.ಎಸ್ .ಪಿ.ಸ್ವಾಮಿ, ವೀರಶೈವ ಸಮಾಜ ಮುಖಂಡ ಎನ್.ಜಿ. ಮರಳು ಸಿದ್ದಸ್ವಾಮಿ ನಾಗಸಮುದ್ರ, ಶಿವಕುಮಾರ್, ಓಂಕಾರ ಮೂರ್ತಿ ಉಪಸ್ಥಿತರಿದ್ದರು.

## ಮಿತ್ರ ಪಕ್ಷ ಬಿಜೆಪಿ ಜೊತೆ ಚರ್ಚಿಸಿ ತೀರ್ಮಾನ

ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಅರಸೀಕೆರೆ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡುವ ವಿಚಾರದಲ್ಲಿ ನಮ್ಮ ನಾಯಕರು ಹಾಗೂ ಮಿತ್ರ ಪಕ್ಷ ಬಿಜೆಪಿ, ಕಾರ್ಯಕರ್ತರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಘೋಷಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಜಿಲ್ಲೆಯಲ್ಲಿ ಕಳೆದ ಎರಡೂವರೆ ವರ್ಷಗಳಿಂದ ನಡೆಯುತ್ತಿರುವ ದೌರ್ಜನ್ಯ ತಡೆಯಲು ಹಾಗೂ ಜನರ ಹಿತದೃಷ್ಟಿಯಿಂದ ಪಕ್ಷ ಏನು ತೀರ್ಮಾನ ಮಾಡುತ್ತೋ ಅದಕ್ಕೆ ನಾನು ಬದ್ಧ ಎಂದರು.

ರಾಷ್ಟ್ರೀಯ ಅಧ್ಯಕ್ಷರು, ಕುಮಾರಣ್ಣ, ಇಲ್ಲಿನ ಸ್ಥಳೀಯ ಬಿಜೆಪಿ ನಾಯಕರು ತೀರ್ಮಾನದಂತೆ ನಡೆದುಕೊಳ್ಳುವೆ. ಪಕ್ಷ, ಕಾರ್ಯಕರ್ತರಿಗೆ ನಿಷ್ಠನಾಗಿರುವೆ. ನಮ್ಮ ಕಾರ್ಯಕರ್ತರನ್ನು ಸದೃಢವಾಗಿ ದೇವೇಗೌಡರು ಕಾಪಾಡಿದ್ದಾರೆ. ಅದನ್ನು ನಾವು ಉಳಿಸಿಕೊಂಡು ಹೋಗಬೇಕಿದೆ. ದೇವೇಗೌಡರು, ಕುಮಾರಸ್ವಾಮಿ ಈ ಜಿಲ್ಲೆಗೆ ಅವರದೇ ಆದ ಕೊಡುಗೆ ಕೊಟ್ಟಿದ್ದಾರೆ. ಹಾಗಾಗಿ ನನ್ನ ಮುಂದಿನ ಸ್ಪರ್ಧೆ ವಿಚಾರದಲ್ಲಿ ಇವರ ತೀರ್ಮಾನವೇ ಅಂತಿಮ ಎಂದು ಸ್ಪಷ್ಟಪಡಿಸಿದರು.

ನಾನು ಹೊಳೆನರಸೀಪುರ ಕ್ಷೇತ್ರ ಮರೆಯಲು ಆಗಲ್ಲ. ದೇವೇಗೌಡರಿಗೆ, ನನಗೆ, ಪ್ರಜ್ವಲ್‌ಗೆ ಅಲ್ಲಿಯ ಜನರು ಆಶೀರ್ವಾದ ಮಾಡಿದ್ದಾರೆ ಎಂದರು.

# ಇಂದು ಕುರುಕ್ಷೇತ್ರ ನಾಟಕ ಪ್ರದರ್ಶನ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಸಂಕ್ರಾಂತಿ ಹಬ್ಬ ಹಾಗೂ ಐತಿಹಾಸಿಕ, ಪುರಾಣ ಪ್ರಸಿದ್ಧ ಬೂಕನಬೆಟ್ಟದ ಜಾತ್ರಾ ಮಹೋತ್ಸವದ ಅಂಗವಾಗಿ ಜ. 11ರ ಸಂಜೆ 7 ಗಂಟೆಗೆ ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಎಂಬ ಪೌರಾಣಿಕ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಸರಸ್ವತಿ ಕಲಾ ಸಂಘದ ಗೌರವಾಧ್ಯಕ್ಷ ಮಧು ಬೆಕ್ಕ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ನಮ್ಮ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯು ಮುಂದಿನ ಪೀಳಿಗೆಗೆ ತಲುಪಿಸುವುದು ಬಹುಮುಖ್ಯ. ಅದನ್ನು ಉಳಿಸಿ ಬೆಳೆಸುವ ಕೆಲಸವಾಗಬೇಕು ಎಂಬುದು ನಮ್ಮ ಸಂಘದ ಧ್ಯೇಯೋದ್ದೇಶವಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ರಾಮಾಯಣ ಮತ್ತು ಮಹಾಭಾರತ ಗ್ರಂಥಗಳು ಮಹಾ ಕಾವ್ಯಗಳಾಗಿದ್ದು, ಈ ಮಹಾಭಾರತದ ಭಗವದ್ಗೀತೆ ಭಾಗವನ್ನು ಆಯ್ದುಕೊಂಡು, ಈ ನಾಟಕವನ್ನು ಚನ್ನರಾಯಪಟ್ಟಣ ತಾಲೂಕಿನ ಪೌರಾಣಿಕ ರಂಗಕರ್ಮಿ ಸಚಿನ್ ರಂಗರಾಜು ನಿರ್ದೇಶನದಲ್ಲಿ, ಆಯ್ದ ಕಲಾವಿದರಿಂದ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.

ಈ ಮಹಾಕಾವ್ಯಗಳಲ್ಲಿ ನಮ್ಮ ಜೀವನಕ್ಕೆ ಅಳವಡಿಸಿಕೊಳ್ಳುವ ಅತ್ಯಮೂಲ್ಯ ಸಂದೇಶಗಳಿದ್ದು, ವಿಶೇಷವಾಗಿ ನಮ್ಮ ಯುವ ಸಮುದಾಯಕ್ಕೆ, ಮುಂದಿನ ತಲೆಮಾರಿಗೆ ನಮ್ಮ ಸಂಸ್ಕೃತಿಯ ಅರಿವು ಮೂಡಿಸಬೇಕಾದ ಅನಿವಾರ್ಯತೆ ಇದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶ್ರೀ ಸರಸ್ವತಿ ಕಲಾ ಸಂಘದ ಅಧ್ಯಕ್ಷ ದ್ವಾರಕೀಶ್ ಬದ್ದಿಕೆರೆ, ಕಾರ್ಯದರ್ಶಿ ದಿನೇಶ್ ನಾರಾಯಣಪುರ ಇದ್ದರು.

# ಪೊಲೀಸ್ ಠಾಣೆ ಮೆಟ್ಟಿಲೇರಿದ ಯಶ್ ತಾಯಿ ಮನೆ ವಿವಾದ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಚಲನಚಿತ್ರ ನಟ ಯಶ್ ತಾಯಿ ಪುಷ್ಪಾ ಅರುಣ್‌ಕುಮಾರ್ ಅವರು ಶನಿವಾರ ಬಡಾವಣೆ ಠಾಣೆಗೆ ಭೇಟಿ ನೀಡಿ ಮನೆ ಜಾಗದ ವಿಚಾರವಾಗಿ ದೂರು ದಾಖಲಿಸಿದರು.

ಕಳೆದ ಭಾನುವಾರ ವಿದ್ಯಾನಗರ ಬಡಾವಣೆಯಲ್ಲಿರುವ ಮನೆಯ ಕಾಂಪೌಂಡ್ ಅನ್ನು ಜಿಪಿಎ ಹೋಲ್ಡರ್ ದೇವರಾಜು ಜೆಸಿಬಿ ಮೂಲಕ ತೆರವುಗೊಳಿಸಿದ್ದರು. ಆ ಹಿನ್ನಲೆಯಲ್ಲಿ ಅವರು ನಗರಕ್ಕೆ ಭೇಟಿ ನೀಡಿದರು.

ನಮ್ಮ ಅನುಪಸ್ಥಿತಿಯಲ್ಲಿ ನಿವೇಶನಕ್ಕೆ ಅಕ್ರಮವಾಗಿ ಪ್ರವೇಶಿಸಿ ಕಾಂಪೌಂಡ್ ಕೆಡವಲಾಗಿದೆ ಎಂದು ಆರೋಪಿಸಿದ ಯಶ್ ತಾಯಿ ಪುಷ್ಪ ಅವರು, ದೇವರಾಜು ಹಾಗೂ ಇತರರ ವಿರುದ್ಧ ದೂರು ನೀಡಿದರು. ನನ್ನ ಜಾಗದಲ್ಲಿ ನನ್ನ ಅನುಮತಿ ಇಲ್ಲದೆ ಕಾಂಪೌಂಡ್ ಹೇಗೆ ಕೆಡವಿದರು ಎಂದು ಪೊಲೀಸರ ಮುಂದೆ ಆಕ್ರೋಶ ವ್ಯಕ್ತಪಡಿಸಿದ ಪುಷ್ಪ, ಕುಟುಂಬದ ಭದ್ರತೆಗೂ ಆತಂಕವಿದೆ ಎಂದು ಹೇಳಿದರು.

ಪುಷ್ಪ ಅವರು ಠಾಣೆಯಲ್ಲಿ ಇದ್ದ ವೇಳೆಯೇ ಠಾಣೆಗೆ ಬಂದ ಜಿಪಿಎ ಹೋಲ್ಡರ್ ದೇವರಾಜು, ದುರ್ಗಾಪ್ರಸಾದ್ ಹಾಗೂ ಅಧಿಕಾರಿ ಹೆಚ್.ಆರ್.ನಟರಾಜು ಎಂಬುವರು ನನ್ನ ಮೇಲೆ ಹಲ್ಲೆ ಮಾಡಲು ಯತ್ನಿಸಿದ್ದು, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಪ್ರತಿದೂರು ನೀಡಿದರು.

# ಪಾಳ್ಯ ನಾಡ ಕಚೇರಿಗೆ ಶಾಸಕ ಸಿಮೆಂಟ್ ಮಂಜು ಭೇಟಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ತಾಲೂಕಿನ ಪಾಳ್ಯ ಹೋಬಳಿ ಕೇಂದ್ರದಲ್ಲಿರುವ ಶಿಥಿಲಾವಸ್ಥೆಯ ನಾಡ ಕಚೇರಿಗೆ ಶಾಸಕ ಸಿಮೆಂಟ್ ಮಂಜು ಭೇಟಿ ನೀಡಿ ಪರಿಶೀಲಿಸಿದರು.

80 ವರ್ಷಗಳ ಹಿಂದೆ ಮಂಗಳೂರು ಹೆಂಚಿನ ಮನೆಯಿಂದ ನಿರ್ಮಿಸಲಾದ ನಾಡ ಕಚೇರಿ ಕಟ್ಟಡವು ಈಗ ಸಂಪೂರ್ಣ ದುಸ್ಥಿತಿಯಲ್ಲಿದ್ದು, ಶಿಥಿಲಾವಸ್ಥೆಯಲ್ಲಿಯೇ ಕಾರ್ಯನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದೆ ಎಂದು ತಿಳಿಸಿದರು.

ನಾಡಕಚೇರಿ ವ್ಯಾಪ್ತಿಯಲ್ಲಿ ಸುಮಾರು 82 ಗ್ರಾಮ ಒಳಗೊಂಡಿದ್ದು, ಕಿರಿದಾದ ಕಟ್ಟಡದ ಕಾರಣ ಸಾರ್ವಜನಿಕರು ಒಳಪ್ರವೇಶಿಸುವುದಕ್ಕೂ ತೀವ್ರ ಅಸೌಕರ್ಯ ಎದುರಿಸುತ್ತಿದ್ದಾರೆ ಎಂದು ಹೇಳಿದರು.

ಹಳೆಯದಾದ ಕಟ್ಟಡದ ಹೆಂಚು ಹಾಗೂ ಮರದ ತೀರುಗಳು ಯಾವಾಗ ಬೇಕಾದರೂ ಮುರಿದು ಬೀಳುವ ಸಾಧ್ಯತೆ ಇದ್ದು, ನಾಡ ಕಚೇರಿಗೆ ಕೆಲಸಕ್ಕಾಗಿ ಆಗಮಿಸುವ ಸಾರ್ವಜನಿಕರ ಸುರಕ್ಷತೆಗೆ ಅಪಾಯ ಉಂಟಾಗುವ ಆತಂಕವಿದೆ. ಮುಂದಿನ ಮಳೆಗಾಲದಲ್ಲಿ ಮಳೆ ನೀರಿನ ಸೋರಿಕೆಯಿಂದ ಸಿಬ್ಬಂದಿ ಕೆಲಸ ನಿರ್ವಹಿಸಲು ತೀವ್ರ ತೊಂದರೆ ಎದುರಿಸಬೇಕಾಗುವ ಪರಿಸ್ಥಿತಿ ನಿರ್ಮಾಣವಾಗಿದೆ



ಎಂದು ಆತಂಕ ವ್ಯಕ್ತಪಡಿಸಿದರು.

ಸಾರ್ವಜನಿಕರ ಕೆಲಸ ಕಾರ್ಯಗಳು ಸರಾಗವಾಗಿ ನಡೆಯುವಂತೆ ಹಾಗೂ ಸಿಬ್ಬಂದಿಗೆ ಸುಸಜ್ಜಿತ ವಾತಾವರಣ ಒದಗಿಸುವ ನಿಟ್ಟಿನಲ್ಲಿ ಸರ್ಕಾರವು ಪಾಳ್ಯ ನಾಡಕಚೇರಿಗೆ ನೂತನ ಕಟ್ಟಡ ನಿರ್ಮಾಣಕ್ಕೆ ತಕ್ಷಣ ಕ್ರಮ ಕೈಗೊಳ್ಳಬೇಕು. ಇದರಿಂದ ನಾಗರಿಕರಿಗೆ ಸಕಾಲದಲ್ಲಿ ಉತ್ತಮ ಹಾಗೂ ಸುಲಭ ಸೇವೆ ಲಭ್ಯವಾಗಲಿದೆ ಎಂದು ಶಾಸಕ ಸಿಮೆಂಟ್ ಮಂಜು ಮನವಿ ಮಾಡಿದರು.

### ಜಿಲ್ಲಾಧಿಕಾರಿಗೆ ಪತ್ರ

ಆಲೂರು ತಾಲೂಕಿನ ಪಾಳ್ಯ ಹೋಬಳಿಯ ನಾಡ ಕಚೇರಿ ವ್ಯಾಪ್ತಿ ಸುಮಾರು 30 ಕಿ.ಮೀ. ವಿಸ್ತಾರ ಹೊಂದಿದ್ದು, 82ಕ್ಕೂ ಹೆಚ್ಚು ಗ್ರಾಮಗಳನ್ನು ಒಳಗೊಂಡಿದೆ. ಈ ವ್ಯಾಪ್ತಿಯ ಕಣತೂರು, ವಾಟೆಹೊಳೆ ಹಾಗೂ ಮಡಬಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಮಾರು 30 ಗ್ರಾಮಗಳ ಸಾರ್ವಜನಿಕರು ನಾಡಕಚೇರಿ ಕೆಲಸಗಳಿಗಾಗಿ 30 ಕಿ.ಮೀ. ದೂರ ಪ್ರಯಾಣಿಸಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದಾರೆ.

ಸಣ್ಣ ಕೆಲಸಗಳಿಗೂ ಹೆಚ್ಚಿನ ಕಾಲ ವ್ಯಯವಾಗುತ್ತಿರುವುದರಿಂದ ರೈತರು, ವಿದ್ಯಾರ್ಥಿಗಳು ಹಾಗೂ ಹಿರಿಯ ನಾಗರಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಕಣತೂರು ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದಲ್ಲಿ ಉಪ ನಾಡಕಚೇರಿ ಆರಂಭಿಸಬೇಕು ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

ಈ ಸಂಬಂಧ ಜಿಲ್ಲಾಧಿಕಾರಿ ಶೀಘ್ರದಲ್ಲೇ ಸ್ಥಳಕ್ಕೆ ಭೇಟಿ ನೀಡಿ ಪಾಳ್ಯ ನಾಡ ಕಚೇರಿಯ ವ್ಯಾಪ್ತಿಯಿಂದ ಕಣತೂರು, ವಾಟೆಹೊಳೆ ಹಾಗೂ ಮಡಬಲು ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳನ್ನು ಬೇರ್ಪಡಿಸಿ ಉಪ ನಾಡಕಚೇರಿ ಸ್ಥಾಪನೆಗೆ ಕ್ರಮ ಕೈಗೊಂಡರೆ, ಕಂದಾಯ ಸೇವೆಗಳು ಸಾರ್ವಜನಿಕರಿಗೆ ಸುಲಭವಾಗಿ ಮತ್ತು ಸಮೀಪದಲ್ಲೇ ಲಭ್ಯವಾಗಲಿವೆ ಎಂದು ಶಾಸಕ ಸಿಮೆಂಟ್ ಮಂಜು ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದಾರೆ.

# ಗಾಂಧೀಜಿ ಹೆಸರಿಗೆ ಬಿಜೆಪಿ ಅಗೌರವ ತಂದಿಲ್ಲ

## ವಿ.ಪ. ಸದಸ್ಯ ಸಿ.ಟಿ.ರವಿ ಪ್ರತಿಪಾದನೆ | ಕಾಂಗ್ರೆಸ್ ವಿರುದ್ಧ ವಾಗ್ದಾಳಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಹಾತ್ಮ ಗಾಂಧೀಜಿ ಅವರಿಗೆ ಯಾವತ್ತಿಗೂ ಬೆಲೆ ನೀಡದ ಕಾಂಗ್ರೆಸ್ ಮನರೇಗಾ ಹೆಸರು ಬದಲಿಸಿದ್ದಕ್ಕೆ ಇಲ್ಲಸಲ್ಲದ ಆರೋಪ ಮಾಡುವುದು ಸರಿಯಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಕ್ರೋಶ ವ್ಯಕ್ತಪಡಿಸಿದರು.




ಸುದ್ದಿಗೋಷ್ಟಿಯಲ್ಲಿ ಶನಿವಾರ ಮಾತನಾಡಿ, ರಾಮ ರಾಜ್ಯದ ಕನಸು ಕಂಡಿದ್ದ ಮಹಾತ್ಮ ಗಾಂಧೀಜಿ ಅವರ ಕನಸು ಸಾಕಾರಗೊಳಿಸುವುದಕ್ಕಾಗಿ ನರೇಗಾ ಯೋಜನೆಯಲ್ಲಿ ಬದಲಾವಣೆ ಮಾಡಿಕೊಳ್ಳಲಾಗಿದೆ. ಗಾಂಧಿ ಹೆಸರನ್ನು ತೆಗೆದ ಮಾತ್ರಕ್ಕೆ ಅಗೌರವ ಎಂದು ಭಾವಿಸಬಾರದು. ಗಾಂಧಿ ತತ್ವಗಳನ್ನು ಪಾಲಿಸಬೇಕಾಗುತ್ತದೆ. ಗಾಂಧೀಜಿ ರಾಮನ ಸ್ಮರಿಸುತ್ತಿದ್ದರು. ನೀವು ರಾಮನ ಅಸ್ತಿತ್ವವನ್ನು ಪ್ರಶ್ನಿಸಿದಿರಿ. ಗಾಂಧೀಜಿ ಪಾರದರ್ಶಕತೆ ಪ್ರತಿಪಾದಿಸಿದ್ದರು. ನೀವು ಭ್ರಷ್ಟಾಚಾರ ಬೆಳೆಸಿದಿರಿ. ಗಾಂಧೀಜಿ ಹೆಸರು ಹೇಳಲು ನೀವು ನೈತಿಕತೆ ಉಳಿಸಿಕೊಂಡಿಲ್ಲ. ಗಾಂಧಿ ಹೆಸರಿನ ಕಾಂಗ್ರೆಸ್ಸಿಗರು ಉಳಿಸಿಕೊಂಡಿದ್ದಾರೆ ಹೊರತು ಅವರ ತತ್ವಗಳನ್ನಲ್ಲ. ಗಾಂಧೀಜಿ ಬದುಕಿದ್ದರೆ ನಿಮ್ಮ ವಿರುದ್ಧ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದರು ಇಲ್ಲವೇ ಸಲ್ಲೇಖನ ವ್ರತ ಕೈಗೊಳ್ಳುತ್ತಿದ್ದರು ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

### ಲಕ್ಷಾಂತರ ರೂ. ಲೂಟಿ:

ಅಧಿಕಾರಿಗಳು, ಗುತ್ತಿಗೆದಾರರಿಗೆ ಲಾಭ ಮಾಡಿಕೊಡುತ್ತಿದ್ದ ನರೇಗಾ ಯೋಜನೆಯನ್ನು ವಿಬಿ-ಜಿ-ರಾಮ್-ಜಿ ಎಂದು ಪರಿವರ್ತನೆಗೊಳಿಸಿ, ಪಾರದರ್ಶಕ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪರಿಷ್ಕರಣೆ ಮಾಡಲಾಗಿದೆ. ಆದರೆ, ಕಾಂಗ್ರೆಸ್ ಉದ್ದೇಶ ಪೂರ್ವಕವಾಗಿ ಅಪಪ್ರಚಾರ ಮಾಡುತ್ತಿದೆ ಎಂದು ದೂರಿದರು.

ಕೇಂದ್ರ ಸರ್ಕಾರದ ಉದ್ದೇಶ ಜನರಿಗೆ ಉದ್ಯೋಗ ನೀಡುವುದರ ಜೊತೆಗೆ ಗ್ರಾಮೀಣಾಭಿವೃದ್ಧಿ ಸಾಧಿಸುವುದಾಗಿದೆ. ಮಹಾತ್ಮ ಗಾಂಧೀಜಿ ಅವರ ಆಶಯಗಳನ್ನು ಸಾಕಾರಗೊಳಿಸುವ ಉದ್ದೇಶದಿಂದ ನರೇಗಾ ಯೋಜನೆಯಲ್ಲಿ ಬದಲಾವಣೆ ಮಾಡಲಾಗಿದೆ. ಆದರೆ, ಕಾಂಗ್ರೆಸ್‌ನವರು ಜನರ ಉದ್ಯೋಗದ ಹಕ್ಕನ್ನು ಕಸಿದುಕೊಳ್ಳುತ್ತದೆ ಎಂದು ಸುಳ್ಳು ಹೇಳುತ್ತಿದೆ. ವಾಸ್ತವವಾಗಿ 100 ದಿನಗಳಿಂದ 125 ದಿನಕ್ಕೆ ಏರಿಸಲಾಗಿದೆ ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶದ ಜನರು ಕೆಲಸಕ್ಕಾಗಿ ಗುಳೆ ಹೋಗುವುದನ್ನು ತಪ್ಪಿಸಲು 1989ರಲ್ಲಿ ಪ್ರಧಾನ ಮಂತ್ರಿ ರೋಜಗಾರ್ ಯೋಜನೆ ಜಾರಿಗೊಳಿಸಲಾಯಿತು. ನಿರ್ದಿಷ್ಟ ಬಜೆಟ್ ಅನ್ನು ಆಗ ಇಟ್ಟಿರಲಿಲ್ಲ. ಅಟಲ್ ಬಿಹಾರಿ ವಾಜಪೇಯಿ ಅವರು ಜವಾಹರ್ ಗ್ರಾಮ ಸಮೃದ್ಧಿ ಯೋಜನೆ ಜಾರಿಗೊಳಿಸಿದರು.

2005ರಲ್ಲಿ ಕಾಂಗ್ರೆಸ್ ಸರ್ಕಾರ ಅದಕ್ಕೆ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ ಎಂದು ಹೆಸರು ಬದಲಾಯಿಸಿತು. ಕಾಲಕ್ರಮೇಣ ಯೋಜನೆಗಳಲ್ಲಿ ಬದಲಾವಣೆ ಸಹಜ. ಅದೇ ರೀತಿ ವಿಬಿ-ಜಿ-ರಾಮ್-ಜಿ ಯೋಜನೆಯಲ್ಲಿ ಕೆಲವು ಅಗತ್ಯ ಮಾರ್ಪಾಡು ಮಾಡಲಾಗಿದೆ. ಕಾಂಗ್ರೆಸ್ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಲಾಭಕ್ಕಾಗಿ ನರೇಗಾ ಯೋಜನೆ ರೂಪಿಸುತ್ತಿದೆ. ಆದರೆ ಬಿಜೆಪಿ ಸರ್ಕಾರ ಉದ್ಯೋಗ ಸೃಷ್ಟಿಸುವ ಜೊತೆಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಹೆಚ್ಚಿನ ಒತ್ತು ನೀಡಲಾಗಿದೆ ಎಂದು ಹೇಳಿದರು.

ಸತ್ಯ ಹೊಸ್ತಿಲು ದಾಟುವ ಮುನ್ನ ಸುಳ್ಳು ಊರು ಸುತ್ತಾಡುತ್ತದೆ ಎಂಬ ಮಾತಿನಂತೆ ಕಾಂಗ್ರೆಸ್ ಈ ಯೋಜನೆಯಿಂದ ಗ್ರಾಮೀಣ ಜನರ ಉದ್ಯೋಗ ಕಸಿದುಕೊಳ್ಳಲಾಗುತ್ತಿಲ್ಲ. ಬದಲಾಗಿ ಕೆಲಸದ ದಿನಗಳನ್ನು ಹೆಚ್ಚಿಸಲಾಗಿದೆ. ಹಿಂದೆ ತಿಂಗಳುಗಳಾದರೂ ವೇತನ ಸಿಗುತ್ತಿರಲಿಲ್ಲ, ಈಗ ಕೇವಲ 14 ದಿನಗಳೊಳಗೆ ವೇತನ ಪಾವತಿ ವ್ಯವಸ್ಥೆ ಮಾಡಲಾಗಿದೆ. ಗ್ರಾಮ ಪಂಚಾಯಿತಿಗಳ ಅಧಿಕಾರ ಕಡಿತವಾಗಿದೆ ಎಂಬ ಆರೋಪವನ್ನು ತಳ್ಳಿ ಹಾಕಿದ ಅವರು, ಮುಂದೆಯೂ ಗ್ರಾಮ ಪಂಚಾಯಿತಿಗಳೇ ಈ ಯೋಜನೆಯ ಕೇಂದ್ರಬಿಂದು ಆಗಿರಲಿವೆ. ವಿಕಸಿತ ಗ್ರಾಮ ಪಂಚಾಯಿತಿಗಳನ್ನು ರೂಪಿಸಲು ಈ ಯೋಜನೆ ಸಹಕಾರಿಯಾಗಲಿದೆ ಎಂದರು.

ಶಾಸಕ ಸಿಮೆಂಟ್ ಮಂಜು, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಮುಖಂಡರಾದ ಗಿರೀಶ್, ಚಂದ್ರು ಹಾಜರಿದ್ದರು.

# ಪೂಮಡಿಹಳ್ಳಿ ಕೃಷಿ ಪತ್ತಿನ ಸಂಘಕ್ಕೆ ಅವಿರೋಧ ಆಯ್ಕೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲೂಕಿನ ಜುಟ್ಟನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೂಮಡಿಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಪಿ.ಕೆ.ನಾಗರಾಜು, ಉಪಾಧ್ಯಕ್ಷರಾಗಿ ಬೇಡರಹಳ್ಳಿ ಮಂಜಪ್ಪ ಅವಿರೋಧ ಆಯ್ಕೆಯಾಗಿದ್ದಾರೆ.

ಈಚೆಗೆ ಈ ಸಂಘಕ್ಕೆ ನಡೆದ ಚುನಾವಣೆಯಲ್ಲಿ 11 ನಿರ್ದೇಶಕರು ಆಯ್ಕೆಯಾಗಿದ್ದರು. ಶುಕ್ರವಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಪಿ.ಕೆ.ನಾಗರಾಜು ಮತ್ತು ಬೇಡರಹಳ್ಳಿಯ ಮಂಜಪ್ಪ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಶಕುಂತಲಾ ಘೋಷಿಸಿದರು.

ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಕೃಷಿ ಪತ್ತಿನ ಸಹಕಾರ ಸಂಘದಿಂದ ಪಡೆದ ಕೃಷಿ ಸಾಲವನ್ನು ಬೇರೆ ಯಾವುದೇ ತರಹದ ಉದ್ದೇಶಗಳಿಗೆ ಬಳಸಿಕೊಳ್ಳದೇ ಬೆಳೆಗಾಗಿಯೇ ಉಪಯೋಗಿಸಿಕೊಳ್ಳಿ ಎಂದು ಸಲಹೆ ನೀಡಿದರು. ಕೃಷಿಗೆ ಪಡೆದ ಬೆಳೆ ಸಾಲವನ್ನು ಸಕಾಲದಲ್ಲಿ ಮರು ಪಾವತಿಸುವುದರಿಂದ ಹೊಸ ಸಾಲ ಅಪೇಕ್ಷಿಸುವ ರೈತರಿಗೂ ವಿತರಿಸಲು ಅನುಕೂಲವಾಗುತ್ತದೆ ಎಂದರು.

ನಿರ್ದೇಶಕರಾದ ಬಸವರಾಜು ಪ್ರಭು, ಸ್ನೇಹಜೀವಿ ಮಂಜು ಗಣೇಶ, ನಿಖಿಲ್ ಬೋರೇಗೌಡ, ಕೃಷ್ಣೇಗೌಡ, ಶಕುಂತಲಾ ಮಲ್ಲೇಶ್, ಶಾಂತ ಪುಟ್ಟಸ್ವಾಮಿ, ರಾಜಶೇಖರ್, ಮುಖಂಡರಾದ ದೇವರಾಜೇಗೌಡ, ಪಿ.ಕೆ.ಮಂಜೇಗೌಡ, ದೊಡ್ಡೇಗೌಡ, ಬೋರೇಗೌಡ, ದಾಸರಹಳ್ಳಿ ರಂಗೇಗೌಡ ಇತರರಿದ್ದರು.

# ಮಹಾನಗರ ಪಾಲಿಕೆಗೆ ಜೆಸಿಬಿ-ಸ್ವಚ್ಛತಾ ಯಂತ್ರೋಪಕರಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಹಾನಗರ ಪಾಲಿಕೆಯ 15ನೇ ಹಣಕಾಸು ಯೋಜನೆಯಡಿ ನೂತನವಾಗಿ ಖರೀದಿಸಿದ್ದ ಜೆಸಿಬಿ ಹಾಗೂ ಕಸ ತುಂಬುವ ಟಿಪ್ಪರ್ ಲಾರಿಗಳಿಗೆ ಶಾಸಕ ಹೆಚ್.ಪಿ.ಸ್ವರೂಪ್ ಪೂಜೆ ಸಲ್ಲಿಸಿ ಹಸ್ತಾಂತರಿಸಿದರು.




2 ಕೋಟಿ ರೂ. ವೆಚ್ಚದಲ್ಲಿ ಎರಡು ಟಿಪ್ಪರ್, ಎರಡು ಜೆಸಿಬಿ, ಒಂದು ಸ್ವಚ್ಛತಾ ಯಂತ್ರೋಪಕರಣ ಖರೀದಿಸಲಾಗಿದೆ. ನಗರ ಪಾಲಿಕೆ ಆಯುಕ್ತರು, ಇಂಜಿನೀಯರ್, ಅಧಿಕಾರಿಗಳು ಸೇರಿ 15ನೇ ಹಣಕಾಸು ಯೋಜನೆಯಡಿ ನಾಗರಿಕರ ಸೇವೆಗೆ ಉಪಯುಕ್ತ ಮತ್ತು ಮೂಲ್ಯವಾಗಿರುವ ಯಂತ್ರೋಪಕರಣ ಖರೀದಿ ಮಾಡಿದ್ದಾರೆ.

2 ಟಿಪ್ಪರ್, 2 ಜೆಸಿಬಿ, ಬೀದಿ ಬದಿಯ ಕ್ಲೀನ್ ಸ್ವೀಪಿಂಗ್ ಮಷಿನ್ ನಗರಪಾಲಿಕೆಗೆ ಸೇರ್ಪಡೆಯಾಗಿದ್ದು, ಇದರ ಸದ್ಬಳಕೆಯಾಗಬೇಕು, ದುರುಪಯೋಗ ಆಗಬಾರದು ಎಂದು ಮನವಿ ಮಾಡಿದರು.

ಕಸದ ನಿರ್ವಹಣೆ ಮಾಡುವ ಮೂಲಕ ನಗರದ ಸ್ವಚ್ಛತೆ ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ನಾವೆಲ್ಲರೂ ಸೇರಿ ನಗರದ ಜನರಿಗೆ ಅಗತ್ಯ ಇರುವ ಕೆಲಸ ಕಾರ್ಯ ಮಾಡೋಣ, ಇದಕ್ಕೆ ಸಾರ್ವಜನಿಕರೂ ಸಹಕಾರ ನೀಡಬೇಕು.

ನಗರದ ಅನೇಕ ಕಡೆಗಳಲ್ಲಿ ಕಸ ಹಾಕಲೆಂದೇ ಬ್ಲಾಕ್ ಸ್ಪಾಟ್ ಗುರುತಿಸಲಾಗಿದೆ. ಅಲ್ಲಿಗೆ ಪಾಲಿಕೆಯ ವಾಹನಗಳು ಬರಲಿವೆ. ಆ ಸ್ಥಳಕ್ಕೆ ಕಸ ಸುರಿಯದೇ ಪಾಲಿಕೆ ವಾಹನಗಳಲ್ಲೇ ಕಸ ಸುರಿಯಬೇಕು. ಯಾರು ಕಸದ ವಾಹನಗಳಿಗೆ ಕಸ ಹಾಕದೆ, ಎಲ್ಲೆಂದಲರಲ್ಲಿ ಹಾಕುತ್ತಾರೂ ಅಂತವನ್ನು ಪತ್ತೆ ಮಾಡಲು ಸಿಸಿ ಕ್ಯಾಮೆರಾ ಅಳವಡಿಸಿ, ಅಲ್ಲಿ ಪತ್ತೆಯಾದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

## ಹೆಚ್ಚುವರಿ ಅನುದಾನ ಬಂದಿಲ್ಲ

ಹಾಸನ ನಗರಪಾಲಿಕೆಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿ ಅನುದಾನ ಬಂದಿಲ್ಲ, ಸಿಬ್ಬಂದಿ ನೇಮಕಕ್ಕೂ ಅವಕಾಶ ನೀಡಿಲ್ಲ.

ಈ ಸಂಬಂಧ ಬೆಳಗಾವಿ ಅಧಿವೇಶನದಲ್ಲೂ ಚರ್ಚೆ ಮಾಡಲಾಗಿದೆ. ಆದರೆ ಸರ್ಕಾರ ಆಗಲ್ಲ ಎಂದು ಉತ್ತರ ನೀಡಿದೆ. ಈ ಬಗ್ಗೆ ಮುಂದೆಯೂ ಪ್ರಯತ್ನ ಮಾಡಲಾಗುವುದು. ಅನುದಾನ, ಸಿಬ್ಬಂದಿ ಇಲ್ಲದೆ ನಗರದ ಅಭಿವೃದ್ಧಿ ಕುಂಠಿತ ಆಗಿದೆ ಎಂಬುದು ಸತ್ಯ. ಶಾಸಕರಿಗೂ ಸೂಕ್ತ ರೀತಿಯ ಅನುದಾನ ನೀಡಿಲ್ಲ.

ಆದರೂ ನಾಲ್ಕೂವರೆ ಕೋಟಿ ಶಾಸಕರ ಅನುದಾನವನ್ನೂ ನಗರದ ವಿವಿಧ ಅಭಿವೃದ್ಧಿಗೆ ವಿನಿಯೋಗ ಮಾಡಲಾಗಿದೆ. ಮುಖ್ಯಮಂತ್ರಿ ನಿಧಿ ಸೇರಿ ವಿವಿಧ ಅನುದಾನದಡಿ ಹಣ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡುವ ಪ್ರಯತ್ನ ಮುಂದುವರಿಯಲಿದೆ ಎಂದು ಹೇಳಿದರು.

ನಗರಪಾಲಿಕೆ ಸದಸ್ಯ ಎಸ್.ಹೆಚ್ ವಾಸುದೇವ್, ಇಂಜಿನೀಯರ್ ಕೆ.ಆರ್. ಕವಿತಾ ಇತರೆ ಅಧಿಕಾರಿಗಳು ಇದ್ದರು.

# ಬೆಂಕಿಗೆ ಆಹುತಿಯಾದ ನಂದಿನಿ ಮಿಲ್ಕ್ ಪಾರ್ಲರ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ನಗರದ ಬಸಟ್ಟಿಕೊಪ್ಪಲಿನ ನಂದಿನಿ ಮಿಲ್ಕ್ ಪಾರ್ಲರ್ ಸಂಪೂರ್ಣ ಬೆಂಕಿಗಾಹುತಿಯಾಗಿರುವ ಘಟನೆ ಗುರುವಾರ ರಾತ್ರಿ ನಡೆದಿದೆ.

ದಟ್ಟ ಹೊಗೆಯಾಡುತ್ತಿದ್ದುದನ್ನು ಕಂಡು ಸಾರ್ವಜನಿಕರು ಮಧ್ಯರಾತ್ರಿ 1 ಗಂಟೆ ಸಮಯದಲ್ಲಿ ಅಗ್ನಿ ಶಾಮಕ ಸಿಬ್ಬಂದಿ ತಕ್ಷಣ ದೌಡಾಯಿಸಿದರಾರು ಬೆಂಕಿಯ ಕೆನ್ನಾಲಿಗೆಗೆ ಎಲ್ಲಾ ವಸ್ತುಗಳು ಭಸ್ಮವಾಗಿವೆ. ರೆಫ್ರಿಜರೇಟರ್, ಹಾಲು, ಮೊಸರಿನ ಪ್ಯಾಕೆಟ್, 20ಕ್ಕೂ ಹೆಚ್ಚು ಟ್ರೇಗಳು, ಐಸ್ ಕ್ರಿಂ, ಫ್ಯಾನ್ ಸೇರಿ ಅಂದಾಜು 8 ಲಕ್ಷ ರೂ. ಮೌಲ್ಯದ ಸಾಮಾಗ್ರಿ ನಷ್ಟಕ್ಕೀಡಾಗಿದೆ.

ಶುಕ್ರವಾರ ಬೆಳಿಗ್ಗೆ ಕೆಎಂಎಫ್‌ನ ಮಾರಾಟ ವಿಭಾಗ ಅಧಿಕಾರಿಗಳು ಪರಿಶೀಲಿಸಿದರು.




ಮಿಲ್ಕ್ ಪಾರ್ಲರ್ ಮಾಲೀಕ ಚಿರಂತ್ ಮಾತನಾಡಿ, ಗುರುವಾರ ರಾತ್ರಿ 10.30ಕ್ಕೆ ಎಂದಿನಂತೆ ಬಾಗಿಲು ಹಾಕಿಕೊಂಡು ಮನೆಗೆ ತೆರಳಿದ್ದೆವು. ಸಾರ್ವಜನಿಕರ ಮಾಹಿತಿ ಆಧರಿಸಿ ನಾವು ಬರುವ ಮೊದಲೇ ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿದ್ದರು. ಆದರೆ ಅಷ್ಟರಲ್ಲೇ ಎಲ್ಲವೂ ಸುಟ್ಟು ಕರಕಲಾಗಿದೆ. ಅಂದಾಜು 8 ಲಕ್ಷ ರೂ. ನಷ್ಟ ಸಂಭವಿಸಿದೆ ಎಂದು ಅಳಲು ತೋಡಿಕೊಂಡರು.

# ದೂರು ನೀಡಲು ಹೋದವರಿಗೆ ಪೊಲೀಸರ ದೌರ್ಜನ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಮನೆ ಮುಂದಿನ 120ಕ್ಕೂ ಹೆಚ್ಚು ಮೆಣಸಿನ ಗಿಡಗಳನ್ನು ನಾಶ ಮಾಡಿದ್ದವರ ವಿರುದ್ಧ ದೂರು ನೀಡಿದರೆ ಪೊಲೀಸರು ದೂರುದಾರರನ್ನೇ ಪೊಲೀಸ್ ಠಾಣೆಯಲ್ಲಿ ಕೂರಿಸಿ ಕ್ರೌರ್ಯ ಮೆರೆದಿದ್ದಾರೆ ಎಂದು ಬೆಳ್ಳಾವರದ ದೀಪು ಆರೋಪಿಸಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎರಡು ದಿನಗಳ ಹಿಂದೆ ನಮ್ಮ ಮನೆ ಮುಂದೆ ಸುಮಾರು 1200ಕ್ಕೂ ಮೆಣಸಿನ ಬಳ್ಳಿ ಹಾಕಿದ್ದೆವು. ಅದನ್ನು ಅಲ್ಲಿನ ನಿಂಗರಾಜ್ ಎಂಬುವರು ಕಡಿದು ಹಾಕಿದ್ದರು. ಹಾಳು ಮಾಡಿರುವ ಬಗ್ಗೆ ಮಾಹಿತಿ ತಿಳಿದು ಅರೇಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು. ಆದರೆ ನಿಂಗರಾಜ್ ಅವರು ನನ್ನ ಮನೆ ಹತ್ತಿರ ಬಂದು ಕೆಟ್ಟದಾಗಿ ಮಾತನಾಡಿದ್ದಲ್ಲದೆ ಜಾತಿ ನಿಂದನೆ ಮಾಡಿದ್ದಾನೆ. ಪೊಲೀಸ್ ಠಾಣೆಗೆ ಈ ಸಂಬಂಧ ದೂರು ನೀಡಿದರೆ ನಮ್ಮನ್ನು ಸುಮಾರು 10 ಗಂಟೆ ತನಕ ಕೂರಿಸಿದ್ದರು. ಠಾಣೆಯಲ್ಲಿ ಮಹಿಳಾ ಪೇದೆ ಇಲ್ಲದಿದ್ದರೂ ಮಹಿಳೆಯರನ್ನು ರಾತ್ರಿ ಕೂರಿಸಿದ್ದರು. ಕಾನ್ಸಟೇಬಲ್‌ಗಳಾದ ಗುರುಮೂರ್ತಿ, ಶ್ರೀನಿವಾಸ್, ಸುಪ್ರೀತ್ ಎಂಬುವರು ನಮಗೆ ಬೈಯಿದ್ದಾರೆ. ನಾವು ಪ್ರಶ್ನಿಸಲು ಹೋಗಿದ್ದಕ್ಕೆ ಗುರುಮೂರ್ತಿ ಎಂಬುವರು ಬೆಲ್ಟ್ ಬಿಚ್ಚಿಕೊಂಡು ನನಗೆ ಹಾಗೂ ನನ್ನ ಜೊತೆ ಬಂದಿದ್ದ ಬಸವರಾಜ್ ಹಾಗೂ ಅಂಗವಿಕಲ ಶ್ರೀನಿವಾಸ್ ಮೇಲೆ ಮನ ಬಂದಂತೆ ಥಳಿಸಿದ್ದಾರೆ. ನಮ್ಮ ಹೆಂಡತಿ ಅವರ ಸ್ನೇಹಿತರು ಕೇಳಿದಾಗ ನಿಮ್ಮ ಮೇಲೆ ಜಾತಿ ನಿಂದನೆ ಕೇಸ್ ಆಗುತ್ತದೆ ರಾಜಿ ಮಾಡಿಕೊಳ್ಳಿ ಎಂದು ಹೆದರಿಸಿದರು. ಠಾಣೆಯಲ್ಲಿ ಸಿಸಿ ಕ್ಯಾಮರಾ ಇದ್ದರೂ ಇವರು ಈ ರೀತಿಯ ವರ್ತನೆಗೆ ಮದ್ಯ ಸೇವನೆ ಕಾರಣ ಅತಿಯಾಗಿ ಮದ್ಯ ಸೇವನೆ ಮಾಡಿದ್ದ ಗುರುಮೂರ್ತಿ ತಾಳ್ಮೆ ಕಳೆದುಕೊಂಡಿದ್ದರು. ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸದಿದ್ದರೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಬೆಳ್ಳಾವರದ ಶ್ರೀನಿವಾಸ್, ಕವಿತಾ, ಭಾಗ್ಯ ಇದ್ದರು.

# ಶಂಖ ಗ್ರಾಮದಲ್ಲಿ ದೇವಸ್ಥಾನ-ಕೆರೆ ಜಾಗ ಅತಿಕ್ರಮಣ ಆರೋಪ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ : ತಾಲ್ಲೂಕಿನ ಶಂಖ ಗ್ರಾಮದ ಶ್ರೀ ಚನ್ನಕೇಶವ, ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ವ್ಯಾಪ್ತಿಗೆ ಸೇರಿರುವ ಸರ್ಕಾರಿ ಭೂಮಿಯನ್ನು ಕೆಲವರು ಅತಿಕ್ರಮಣ ಮಾಡಿಕೊಂಡಿದ್ದಾರೆ ಎಂದು ಅರ್ಚಕ ಎಸ್.ಎನ್.ಪ್ರಸಾದ್ ಆರೋಪಿಸಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಗ್ರಾಮದ ಕೆಲವರು ಸೇರಿ, ರಾಜಕೀಯ ಪ್ರಭಾವದಿಂದ ಹಲವು ಎಕರೆ ಭೂಮಿಯನ್ನು ಅಕ್ರಮವಾಗಿ ತಮ್ಮಂತೆ ಮಾಡಿಕೊಂಡಿದ್ದಾರೆ. ದೇವಸ್ಥಾನ ಹಾಗೂ ಕೆರೆಯ ಭಾಗದ ಸರ್ಕಾರಿ ಭೂಮಿಯನ್ನು ನಕಲಿ ದಾಖಲೆ ಸೃಷ್ಟಿಸಿ ತಮ್ಮಂತೆ ಮಾಡಿಕೊಂಡು ಕೆಲವರು ಉಳುಮೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಈ ಸಂಬಂಧ ಜಿಲ್ಲಾಧಿಕಾರಿಗೂ ದೂರು ನೀಡಲಾಗಿತ್ತು. ಬಳಿಕ ಅವರ ಸೂಚನೆಯಂತೆ ಸರ್ವೆ ಅಧಿಕಾರಿಗಳು ಮತ್ತು ಸಿಬ್ಬಂದಿ ಜಾಗ ಅಳತೆ ಮಾಡಲು ಬಂದಾಗ ಅವರಿಗೂ ಧಮ್ಕಿ ಹಾಕಲಾಗಿದೆ.




ನಮ್ಮ ಗ್ರಾಮದಲ್ಲಿ ಸುಮಾರು 225 ಕುಟುಂಬಗಳಿದ್ದು, ಇವರಲ್ಲಿ 15-20 ಮಂದಿ ಪ್ರಭಾವಿಗಳು ಒತ್ತುವರಿ ಮಾಡಿ, ಸರ್ಕಾರಕ್ಕೆ, ಇಲಾಖೆಗೆ ವಂಚನೆ ಮಾಡಿದ್ದಾರೆ. ಅತಿಕ್ರಮ ಭೂಮಿ ತೆರವುಗೊಳಿಸಲು ಬಂದ ಅಧಿಕಾರಿಗಳಿಗೆ ಸ್ಥಳೀಯ ನಾಗರಾಜ್ ಸೇರಿ ಕೆಲವರು ಗಲಾಟೆ ಮಾಡಿ ಬೆದರಿಕೆ ಹಾಕಿದ್ದಾರೆ. ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ ಹಿನ್ನಲೆ ಅತಿಕ್ರಮ ಮಾಡಿದವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ಕೂಡ ದಾಖಲಾಗಿದೆ ಎಂದು ತಿಳಿಸಿದರು.

ಇದಾದ ಬಳಿಕ ಪೊಲೀಸರೂ ದೂರು ನೀಡಲಾಗಿದ್ದು, ಒತ್ತುವರಿ ಮಾಡಿರುವ ಭೂಮಿಯು ದೇವಾಲಯ ಹಾಗು ಕೆರೆಗೆ ಸೇರಿದ್ದು ಎಂಬ ದಾಖಲೆ ಹಾಜರು ಪಡಿಸುವಂತೆ ಸೂಚಿಸಿದ್ದಾರೆ.

ಸರ್ಕಾರಿ ಭೂಮಿ ಕಬಳಿಸಿರುವವರು ರಾಜಕೀಯ ಪ್ರಭಾವ ಹೊಂದಿದ್ದಾರೆ. ಇದರಲ್ಲಿ ಮೂರೂ ಪಕ್ಷಗಳ ಕಡೆಯವರು ಭಾಗಿಯಾಗಿದ್ದಾರೆ. ಇದರ ಪರಿಣಾಮವಾಗಿಯೇ ಕ್ರಮ ಕೈಗೊಳ್ಳಲು ವಿಳಂಬವಾಗುತ್ತಿದೆ ಎಂದು ಆರೋಪಿಸಿದ ಅವರು, ಇನ್ನಾದರೂ ಜಿಲ್ಲಾಡಳಿತದ ಅಧಿಕಾರಿಗಳು ಕಬಳಿಕೆದಾರರ ವಿರುದ್ಧ ಕ್ರಮ ಕೈಗೊಂಡು ದೇವಸ್ಥಾನ ಹಾಗೂ ಕೆರೆಯ ಭೂ ಕಬಳಿಕೆ ತಡೆಯಬೇಕು, ಭೂಮಿಯನ್ನು ಮೊದಲಿದ್ದ ಹಾಗೆಯೇ ಯಥಾಸ್ಥಿತಿ ಉಳಿಸಬೇಕು ಎಂದು ಒತ್ತಾಯಿಸಿದರು.

# ಹಾಸನದಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವ ಜ.20ಕ್ಕೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಮಹಾರ್ ಸೈನಿಕರ ಶೌರ್ಯದ ಸ್ಮರಣಾರ್ಥ ಭೀಮಾ ಕೋರೆಂಗಾವ್ ವಿಜಯೋತ್ಸವ ಆಚರಣೆ ಸಮಿತಿಯಿಂದ ಜ. 20ರ ಬೆಳಿಗ್ಗೆ 10 ಗಂಟೆಗೆ ಹಾಸನದ ಪ್ರಜಾಸೌಧದ ಪಕ್ಕದಲ್ಲಿರುವ ರಸ್ತೆಯಲ್ಲಿ ಭೀಮಾ ಕೊರೆಗಾಂವ್ ವಿಜಯೋತ್ಸವ ಆಯೋಜಿಸಲಾಗಿದೆ ಎಂದು ಆಚರಣೆ ಸಮಿತಿ ಅಧ್ಯಕ್ಷ ಹೆಚ್.ಕೆ.ಸಂದೇಶ್ ತಿಳಿಸಿದರು.

ಪಟ್ಟಣದಲ್ಲಿ ಶನಿವಾರ ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಅಂಬೇಡ್ಕರ್ ಅವರಿಗೆ ಸಂವಿಧಾನ ಬರೆಯಲು ಸ್ಫೂರ್ತಿ ನೀಡಿದ ಪ್ರಮುಖ ಸಂಗತಿಗಳಲ್ಲಿ ಭೀಮಾ ಕೊರೆಗಾಂವ್ ವಿಜಯ ಕೂಡ ಒಂದಾಗಿದೆ. ಈ ಘಟನೆಯ ವಿದ್ಯಮಾನಗಳನ್ನು ಇಂದಿನ ತಲೆಮಾರಿಗೆ ತಿಳಿಸುವ ಪ್ರಯತ್ನ ನಾಡಿನಾದ್ಯಂತ ಆಗುತ್ತಿದೆ ಎಂದರು.

ಕ್ರೂರ ಜಾತಿ ಪದ್ಧತಿ, ಅಸ್ಪೃಶ್ಯತೆಯ ನಡುವೆಯೂ ದಲಿತರು ನಡೆಸಿದ ಹೋರಾಟ ಅಂಬೇಡ್ಕರ್ ಅವರ ಬದುಕಿಗೆ ತಿರುವು ಕೊಟ್ಟ ಸಂಗತಿಯಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಪ್ರತಿವರ್ಷ ಭೀಮಾ ಕೋರೆಗಾಂವ್‌ಗೆ ಭೇಟಿ ನೀಡಿ ಹುತಾತ್ಮರ ಸ್ಮರಣಾರ್ಥ ಬ್ರಿಟಿಷ್ ಸರ್ಕಾರ ನಿರ್ಮಿಸಿರುವ ವೀರ ಯೋಧರ ಸ್ಮಾರಕಕ್ಕೆ ಗೌರವ ಸಲ್ಲಿಸುತ್ತಿದ್ದರು. ಮಹಾರ್ ಯೋಧರ ತ್ಯಾಗ ವ್ಯರ್ಥವಾಗಲು ಬಿಡಬಾರದು. ಅವರ ಸಮಾನತೆಯ ಕನಸು ನನಸಾಗಿಸುವುದು ನಮ್ಮ ಗುರಿಯಾಗಬೇಕು ಎಂದರು. ಕಾರ್ಯಕ್ರಮಕ್ಕೆ ಅಂಬೇಡ್ಕರ್ ಅವರ ಮೊಮ್ಮಗ ಭೀಮರಾವ್ ಯಶ್ವಂತ್‌ರಾವ್ ಅಂಬೇಡ್ಕರ್ ಹಾಗೂ ಭಾರತೀಯ ಭೌದ್ಧ ಮಹಾಸಭಾ ಅಧ್ಯಕ್ಷ, ನಿವೃತ್ತ ಡಿಸಿಪಿ ಎಸ್.ಸಿದ್ದರಾಜು ಹಾಗು ಭಾರತೀಯ ಬೌದ್ಧ ಮಹಾಸಭಾದ ಅನೇಕರು ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಟಿಯಲ್ಲಿ ಸಮಾಜದ ಮುಖಂಡರಾದ ರಾಜು ಗೊರೂರು, ಮಂಜು ಕುರುವಂಕ ಭಾಗವಹಿಸಿದ್ದರು.

# ಸಾವಂತನಹಳ್ಳಿ ನ್ಯಾಯಬೆಲೆ ಅಂಗಡಿ ಮುಚ್ಚಲು ಷಡ್ಯಂತ್ರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ತಾಲ್ಲೂಕಿನ ಸಾವಂತನಹಳ್ಳಿ ನ್ಯಾಯಬೆಲೆ ಅಂಗಡಿ ಮುಚ್ಚಿಸಲು ಷಡ್ಯಂತ್ರ ನಡೆಸಲಾಗುತ್ತಿದೆ ಎಂದು ಪಡಿತರ ವಿತರಕರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಕೆ.ಎಂ. ವಿಜಯಕುಮಾರ್ ಆರೋಪಿಸಿದರು.




ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಪಡಿತರ ಚೀಟಿದಾರರು ತಮಗೆ ಅನ್ಯಾಯ ಅಥವಾ ಮೋಸವಾಗುತ್ತಿದೆ ಎಂದು ಸಂಬಂಧ ಆಹಾರ ಇಲಾಖೆಗೆ ದೂರು ನೀಡಲಿ. ಅದನ್ನು ಬಿಟ್ಟು ಕೆಲವರು ವಿಡಿಯೋ ಮಾಡುವ ಮೂಲಕ ಸುಳ್ಳು ಪ್ರಚಾರ ಮಾಡುವ ಮೂಲಕ ಅದನ್ನೇ ಸತ್ಯ ಮಾಡಲು ಹೊರಟಿದ್ದಾರೆ ಎಂದು ದೂರಿದರು.

ಮೊದಲೇ ನ್ಯಾಯಬೆಲೆ ಅಂಗಡಿ ವಿತರಕರು ಹಲವು ಕಾರಣಕ್ಕೆ ಸಂಕಷ್ಟದಲ್ಲಿದ್ದೇವೆ. ಸರಿಯಾದ ಸಮಯಕ್ಕೆ ಕಮೀಷನ್ ಬರುತ್ತಿಲ್ಲ, ಇದರಿಂದ ನಮ್ಮ ಜೀವನ ಕಷ್ಟಕರವಾಗಿದೆ. ನಾವು ಅನ್ಯಾಯ ಮಾಡಿದ್ದರೆ ತೋರಿಸಲಿ, ಅದನ್ನು ಬಿಟ್ಟು ಹೀಗೆಲ್ಲ ತೊಂದರೆ ಕೊಡುವುದು ಸರಿಯಲ್ಲ. ಇದು ಹೀಗೆಯೇ ಮುಂದುವರಿದರೆ ರಾಜ್ಯಮಟ್ಟದ ವಿತರಕರನ್ನು ಕರೆಸಿ ಹಾಸನದಲ್ಲಿ ದೊಡ್ಡ ಮಟ್ಟದ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ತಾಲ್ಲೂಕು ಗ್ಯಾರಂಟಿ ಸಮಿತಿ ಸದಸ್ಯ ಕೇಶವ ಕಾರ್ಲೆ ಮಾತನಾಡಿ, ಆಹಾರ ಇಲಾಖೆಯ ಯತೀಶ ಎಂಬುವರು ಪ್ರತಿ ನ್ಯಾಯಬೆಲೆ ಅಂಗಡಿಯಿಂದ ಲಂಚಕ್ಕೆ ಬೇಡಿಕೆ ಇಡುತ್ತಿದ್ದಾರೆ. 10 ಸಾವಿರ, 15 ಸಾವಿರರೂ. ಕೇಳುತ್ತಿದ್ದಾರೆ. ಹಣ ಕೊಡದೇ ಇದ್ದರೆ ನ್ಯಾಯಬೆಲೆ ಅಂಗಡಿಯನ್ನು ಬೇರೆಡೆಗೆ ಎತ್ತಂಗಡಿ ಮಾಡುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನ್ಯಾಯಬೆಲೆ ಅಂಗಡಿಯವರೋ ಅಥವಾ ಬೇರೆಯವರೋ, ಒಟ್ಟಿನಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ಆಗಲೇಬೇಕು. ಆದರೆ, ವಾಸ್ತವ ತಿಳಿಯದೇ ಕೆಆರ್‌ಎಸ್ ಪಕ್ಷದವರು ಇಲ್ಲ ಸಲ್ಲದ ವಿಡಿಯೋ ಮಾಡಿ ಹರಿಯ ಬಿಡುವ ಮೂಲಕ ಸಮಾಜಕ್ಕೆ ತಪ್ಪು ಸಂದೇಶ ರವಾನೆ ಮಾಡುತ್ತಿದ್ದು, ಆ ಬಗ್ಗೆಯೂ ತನಿಖೆ ಆಗಬೇಕು ಎಂದು ಆಗ್ರಹಿಸಿದರು.

ರಾಜ್ಯ ಸೇವಾದಳದ ಮರ್ಕುಲಿ ಗೋಪಾಲೇಗೌಡ, ಪ್ರಕಾಶ್, ಪುಟ್ಟಶೆಟ್ಟಿ, ರಂಗಸ್ವಾಮಿ ಇದ್ದರು.

# ಬೇಲೂರಿನಲ್ಲಿ ಜೆಡಿಎಸ್ ಸಭೆ ಇಂದು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ವಿಧಾನಸಭಾ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರ ಸಭೆ ಜ. 11ರ ಭಾನುವಾರ ಬೆಳಿಗ್ಗೆ 10.30ಕ್ಕೆ ಪಟ್ಟಣದ ಶ್ರೀ ಶಿವಕುಮಾರಸ್ವಾಮಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪಕ್ಷದ ತಾಲ್ಲೂಕು ಅಧ್ಯಕ್ಷ ತೋ.ಚ.ಅನಂತ ಸುಬ್ಬರಾಯ ತಿಳಿಸಿದ್ದಾರೆ.


ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್. ಲಿಂಗೇಶ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುವರು. ಜ. 24ರಂದು ಹಾಸನದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡಿರುವ ಸಮಾವೇಶ, ಪಕ್ಷ ಸಂಘಟನೆ, ಮುಂಬರುವ ಚುನಾವಣೆಗೆ ತಯಾರಿ ಕುರಿತು ನಾಯಕರು ಮಾತುಕತೆ ನಡೆಸಲಿದ್ದಾರೆ. ಬೇಲೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಅವರು ಕೋರಿದ್ದಾರೆ.

# ಕಾರುಣ್ಯ ಮೂರ್ತಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಸ್ಮರಣೆ

**- ಹೆಚ್.ಕೆ.ಲಕ್ಷ್ಮಿನಾರಾಯಣ,**
**ಸಂಸ್ಕೃತ ಭಾಷಾ ಉಪನ್ಯಾಸಕ**

ಹಸಿದೊಡಲುಗಳಿಗೆ ಪೂರ್ಣಾನ್ನವನುಣಿಸಿ, ನೊಂದ ಮನಗಳಿಗೆ ಸಾಂತ್ವನದ ನುಡಿಯೊಂದಿಗೆ ಆಶ್ರಯವನಿತ್ತು, ಜ್ಞಾನದಾಹಿಗಳಿಗಾಗಿ ಶಿಕ್ಷಣ ಮಂದಿರಗಳನ್ನು ನಿರ್ಮಿಸಿ, ಸ್ವಸ್ಥ ಆರೋಗ್ಯ ಸರ್ವರಿಗೂ ಲಭಿಸಲು ಭವ ವೈದ್ಯರನ್ನು ನೇಮಿಸಿ, ಇಡೀ ಸಮಾಜದುನ್ನತಿಗೆ ಟೊಂಕಕಟ್ಟಿ ನಿಂತಿರುವ ಮಠವೆಂದರೆ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ.

ಸ್ವರ್ಗ ಸೀಮೆಯ ಸುಂದರ ಪ್ರಕೃತಿಯ ಮಡಿಲಿನಲ್ಲಿ ನಲಿವಿಂದ ನರ್ತಿಸುವ ನವಿಲಿನಿಂಡುಗಳಿಂದ ಕಂಗೊಳಿಸುತ್ತಿರುವ ನಾಥ ಸಂಪ್ರದಾಯದ ಹಿನ್ನಲೆಯಿರುವ ಮಹಾಮನೆಯೇ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ. ಶ್ರೀ ಕ್ಷೇತ್ರದ ಅಧಿದೈವವಾಗಿರುವ ಕಾಲಭೈರವೇಶ್ವರಸ್ವಾಮಿಯ ಅನುಗ್ರಹ ಪಡೆಯಲು ಒಕ್ಕಲು ಮನೆತನದ ಅಸಂಖ್ಯಾತ ಭಕ್ತರು ಶ್ರೀ ಕ್ಷೇತ್ರಕ್ಕಾಗಮಿಸಿ ಮಹಾಗುರು ಹಾಗೂ ಶ್ರೀ ಕಾಲಭೈರವೇಶ್ವರಸ್ವಾಮಿಯವರ ದಿವ್ಯಾನುಗ್ರಹ ಪಡೆದು ಪುನೀತಭಾವದಿಂದ ತೆರಳುವ ಸಂಪ್ರದಾಯ ಇಂದಿಗೂ ಅನೂಚನವಾಗಿ ನಡೆದುಕೊಂಡು ಬರುತ್ತಿದೆ. 1974ರಲ್ಲಿ ಗುರು ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ಜಗದ್ಗುರುಗಳಾಗಿ ಪೀಠಾರೋಹಣ ಮಾಡಿದ ಸಂದರ್ಭದಲ್ಲಿ ಶ್ರೀ ಮಠದ ಕಾರ್ಯವ್ಯಾಪ್ತಿ ಬಹು ಚಿಕ್ಕದಾಗಿತ್ತು. ರೈತರು ನೀಡಿದ ಭಿಕ್ಷಾನ್ನದಿಂದ ಶ್ರೀ ಮಠವು ನಡೆಯುವ ಪರಿಸ್ಥಿತಿ ಇತ್ತು. ಕೆಲವೇ ಕೆಲವು ವಿದ್ಯಾರ್ಥಿಗಳಿದ್ದ ಆ ಸಮಯದಲ್ಲಿ ಮಹಾಗುರುಗಳು ಸ್ವತಃ ತಾವೇ ಸಂಸ್ಕೃತ ಪಠ್ಯ ಬೋಧನೆ ಮಾಡುವ ಮೂಲಕ ಸಂಸ್ಕಾರದ ಮಾರ್ಗೋಪದೇಶ ಬೋಧಿಸುತ್ತಿದ್ದರು. ಅವರಿಂದ ಕಲಿತ ವಿದ್ಯೆ ಹಾಗೂ ಸಂಸ್ಕಾರದಿಂದ ಅನೇಕರು ಇಂದು ಸಮಾಜದಲ್ಲಿ ಅತ್ಯುನ್ನತ ಹುದ್ದೆಗಳನ್ನಲಂಕರಿಸಿ ತಮ್ಮ ಬದುಕಿನ ನೆಲೆ ಕಂಡುಕೊಂಡಿದ್ದಾರೆ. ಅಂದಿನ ಆ ಕಷ್ಟಕರ ಸಮಯದಲ್ಲಿ ಶ್ರೀಮಠದಲ್ಲಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರೀತಿಯ ಮಕ್ಕಳೇ..... ಹೊಟ್ಟೆ ತುಂಬಾ ಮುದ್ದೆ ಉಂಡು ಬಾಯ್ತುಂಬಾ ಅನ್ನ ತಿನ್ನಿ ಎಂದು ತಾಯ್ತನದ ಅಕ್ಕರೆಯ ಮಾತುಗಳನ್ನಾಡಿ, ವಿದ್ಯಾವಂತರಾಗಲು ಪ್ರೇರೇಪಿಸುತ್ತಿದ್ದರು.



ಸ್ವತಃ ತಾವೇ ನೇಗಿಲಿಡಿದು ಭೂಮಿಯನ್ನು ಉತ್ತು ಬಿತ್ತಿ ಬೆಳೆದು ಹಸಿದು ಬಂದ ಭಕ್ತರೊಡಲಿಗೆ ಅನ್ನದಾಸೋಹದ ಮಹಾಪ್ರಸಾದವ ಉಣಬಡಿಸುತ್ತಿದ್ದರು.. ಎತ್ತಿನ ಬಂಡಿಯ ಮೇಲೆ ಕುಳಿತು ಗ್ರಾಮ ಗ್ರಾಮಗಳಿಗೆ ಭೇಟಿ ನೀಡಿ ರೈತರು ಉದಾರವಾಗಿ ಭಕ್ತಿಯಿಂದ ನೀಡಿದ ರಾಗಿ, ಭತ್ತ, ದವಸ-ಧಾನ್ಯ ತೆಂಗುಗಳನ್ನು ಪ್ರೀತಿಯಿಂದ ಸ್ವೀಕರಿಸಿ ಮಠದ ಮಕ್ಕಳ ಉದರ ಪೋಷಣೆ ಮಾಡುತ್ತಿದ್ದರು. ಮಹಾಗುರುಗಳ ಈ ಪರಿಯ ಸೇವೆಯನ್ನು ಮನಗಂಡ ಭಕ್ತರು ಶ್ರೀಮಠಕ್ಕೆ ನಾ ಮುಂದೆ..... ತಾ ಮುಂದೆ ಎಂದುಕೊಂಡು ಬರತೊಡಗಿದರು. ತಮ್ಮ ಶಕ್ತ್ಯಾನುಸಾರ ಧನ, ಧಾನ್ಯಗಳನ್ನು ನೀಡಿದರು. ಮಹಾಗುರುಗಳ ಅನೇಕ ಬಗೆಯ ಸಾಮಾಜಿಕ ಸೇವಾ ಕಾರ್ಯಗಳಿಗೆ ನೆರವಿನ ಹಸ್ತ ನೀಡಿದರು. ಕಾಲಕ್ರಮೇಣ ಮಠವು ಮಹಾಸಂಸ್ಥಾನ ಮಠವಾಗಿ ಹೆಮ್ಮರವಾಗಿ ಬೆಳೆಯತೊಡಗಿತು.

ಗ್ರಾಮೀಣ ಯುವಜನರ, ರೈತರ ಏಳಿಗೆ ವಿದ್ಯೆಯಿಂದ ಮಾತ್ರ ಸಾಧ್ಯ, ಎಂದರಿತ ಮಹಾಗುರುಗಳು ಶಾಲೆಗಳನ್ನು ಜೊತೆಗೆ ವಿದ್ಯಾರ್ಥಿನಿಲಯಗಳನ್ನು ಆರಂಭಿಸಿದರು. ಬಡವರ, ಅಶಕ್ತರ, ನಿರ್ಗತಿಕರ ಅನೇಕ ಮಕ್ಕಳು ಜಾತಿ ಮತ ಭೇದವಿಲ್ಲದೆ ಶ್ರೀಮಠದಲ್ಲಿ ಅಧ್ಯಯನ ಮಾಡತೊಗದರು. ಅಂದಿನಿಂದ ಆರಂಭಗೊಂಡ ಶಿಕ್ಷಣ ಸಂಸ್ಥೆಗಳು ಇಂದಿಗೆ 575ಕ್ಕೂ ಅಧಿಕವಾಗಿ ವಿದ್ಯಾದಾನವನ್ನು ನೀಡುತ್ತಿವೆ. ಈ ಬಗೆಯ ಶೈಕ್ಷಣಿಕ ಕ್ರಾಂತಿಯ ಹರಿಕಾರರು..ಈ ಯುಗದ ಯುಗಯೋಗಿ, ಶಿಕ್ಷಣಭೀಷ್ಮ, ಅಕ್ಷರಸಂತ, ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಗುರುಗಳು. ದೀಪ ತನ್ನನ್ನು ತಾನು ಸುಟ್ಟುಕೊಂಡು ಸುತ್ತಲಿನ ಕತ್ತಲನ್ನು ಹೊರದೂಡಿ ಬೆಳಕನ್ನು ನೀಡುವಂತೆ, ತಮ್ಮ ಎಲ್ಲಾ ಬಗೆಯ ಸುಖವನ್ನು ತ್ಯಾಗ ಮಾಡಿ ನಮ್ಮಂತಹ ಅನೇಕ ದೀನ ದಲಿತರ ಬದುಕಿಗೆ ಬೆಳಕಾದರು. ಮಹಾಗುರುಗಳು ನೀಡಿದ ವಿದ್ಯೆ ಹಾಗೂ ಉದ್ಯೋಗದಿಂದ ನಾವಿಂದು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗಿದೆ.

ಜಾತಿ ವಿಜಾತಿಯ ಬೇಧವನೆಣಿಸದೆ ಸರ್ವ ಜನಾಂಗವನ್ನು ಸರ್ವ ಧರ್ಮಗಳನ್ನು ಸಮಚಿತ್ತತೆಯಿಂದ ಕಂಡ ವಿಶ್ವಮಾನ್ಯತೆಯ ಯುಗಪುರುಷರಿವರು. ಸಮಾಜದ ತುಳಿತಕ್ಕೊಳಗಾಗಿ ಅಸ್ಪೃಶ್ಯತೆಯ ಕಾಳ್ಗಿಚ್ಚಿನಿಂದ ನೊಂದು ಬೆಂದ ನನ್ನಂತಹ ಅನೇಕರ ಒಡಲುಗಳಿಗೆ ಪ್ರೀತಿಯ ತೈಲವನಚ್ಚಿ, ಆಸರೆ ನೀಡಿ ನಮ್ಮ ಬದುಕು ಹಸನು ಮಾಡಿದ ಮಹಾಸಂತರಿವರು.

ಮಹಾಗುರುಗಳ ಕಂಗಳಲ್ಲಿದ್ದ ಆಕರ್ಷಕ ಹೊಳಪು, ಮೊಗದಲ್ಲಿದ್ದ ಮಂದಸ್ಮಿತ ನಗುವಿನಿಂದೊಡಗೂಡಿದ ತೇಜಸ್ಸು, ಹಣೆಯ ಮೇಲೆ ಕಾಣಸಿಗುವ ಭಸ್ಮಲೇಪಿತ ತಿಲಕ, ಕೊರಳಲ್ಲಿದ್ದ ರುದ್ರಾಕ್ಷಿಯ ಹಾರ, ಜ್ಞಾನೋದಯದ ಸಂಕೇತವಾಗಿ ಧರಿಸಿದ್ದ ಕಾಷಾಯ ವಸ್ತ್ರ, ಪಾದಗಳಲ್ಲಿದ್ದ ಮರದ ಹಾವುಗೆಗಳು(ಪಾದುಕೆಗಳು), ತಾಯ್ತನದ ಮಮತೆಯ ಪರಿಶುದ್ಧ ಅಂತಃಕರಣದ ಮನೋಮೂರ್ತಿಯನ್ನು ಕಂಡಾಗ ಸಾಕ್ಷಾತ್ ದೇವರ ಅಪರಾವತಾರದ ರೂಪದಲ್ಲಿ ಭಕ್ತರಿಗೆ ದರ್ಶನ ನೀಡುತ್ತಿದ್ದ ಧರ್ಮ ಸೂರ್ಯರಿವರು.

ಸಮ ಸಮಾಜದ ನಿರ್ಮಾಣದ ಕನಸು ಹೊತ್ತು ಅದನ್ನು ಸಾಕಾರಗೊಳಿಸುವಲ್ಲಿ ಶ್ರಮಿಸಿದ ಈ ಯುಗದ ಮಹಾಯೋಗಿಗಳಾದ ಪ್ರಾತಃಸ್ಮರಣೀಯ ಯುಗಯೋಗಿ ಪರಮಪೂಜ್ಯ ಜಗದ್ಗುರು ಪದ್ಮಭೂಷಣ ಶ್ರೀ ಡಾ. ಬಾಲಗಂಗಾಧರನಾಥ ಮಹಾಗುರುಗಳು..... ಇಡೀ ಜಗತ್ತಿಗೆ ಬೆಳಕು ನೀಡುವ ಸೂರ್ಯ ತನ್ನ ಪಥವನ್ನು ಬದಲಿಸುವ ಉತ್ತರಾಯಣದ ಪುಣ್ಯಕಾಲದ ಶುಭ ಸಂಕ್ರಾಂತಿಯ ಸನಿಹದ ದಿನವಾದ 13-01-2013ರ ಇಳಿ ಹೊತ್ತಿನಲ್ಲಿಯೇ ಶ್ರೀ ಆದಿಚುಂಚನಗಿರಿಯ ಪುಣ್ಯಕ್ಷೇತ್ರದ ಸೂರ್ಯ ತಮ್ಮ ಇಹಲೋಕದ ಪಥ ಬದಲಿಸಿ, ಶ್ರೀ ಕಾಲಭೈರವನೆಡೆಗೆ ಪಯಣಿಸಿದ ಅತ್ಯಂತ ದುಃಖಕರವಾದ ದಿನ. ಈ ದಿನ ನಮ್ಮಂತಹ ಅನೇಕರ ಬದುಕಿಗೆ ಕಾರ್ಗತ್ತಲು ಕವಿದಂತಾಯಿತು. ಅನಾಥಪ್ರಜ್ಞೆ ಕಾಡತೊಡಗಿತು. ವರ್ಣಿಸಲಾಗದ ದುಃಖದ ಕಣ್ಣೀರಿನಿಂದ ಕಣ್ಣುಗಳು ಮಂಜಾದವು. ಹೃದಯ ಭಾರವಾಯಿತು. ದುಃಖ ಉಮ್ಮಳಿಸಿ ಬಿಕ್ಕಿ ಬಿಕ್ಕಿ ಅತ್ತೆವು. ಮಹಾಗುರುಗಳನ್ನು ನೆನೆ ನೆನೆದು ಗೋಗರೆದೆವು. ಮನಸ್ಸು ಶೂನ್ಯದೆಡೆಗೆ ಹೊರಳಿತು. ಬಾರದ ಲೋಕಕ್ಕೆ ಪಯಣಿಸಿದ ಮಹಾಗುರುಗಳಿಗೆ ನಮ್ಮ ಆರ್ತನಾದ ಕೇಳಿಸಿತೋ ಇಲ್ಲವು ತಿಳಿಯದಾದೆವು..

ಆ ದಿನ ರಾತ್ರಿ ಒಂಭತ್ತು ಘಂಟೆಗೆ ಹಾಸನದಿಂದ ಬೆಂಗಳೂರಿಗೆ ಹೊರಟೆವು.. ದಾರಿಯುದ್ದಕ್ಕೂ ಮಹಾಗುರುಗಳ ಸನಿಹದಲ್ಲಿದ್ದ ಚಿತ್ರಣವನ್ನೇ ಮೆಲುಕು ಹಾಕುತ್ತಾ, ಅವರ ಸಮಾಜಮುಖೀ ಕಾರ್ಯಗಳನ್ನು ಮನಸಾ ಹೊಗಳುತ್ತಾ, ಬೆಂಗಳೂರಿನ ವಿಜಯನಗರ ಮಠಕ್ಕೆ ಬಂದೆವು. ಮಠದ ಅಂಗಳದಲ್ಲಿ ಗಾಜಿನ ಪೆಟ್ಟಿಗೆಯಲ್ಲಿ ನಿಸ್ತೇಜವಾಗಿ ಪವಡಿಸಿದ್ದ ನನ್ನ ಬದುಕಿಗೆ ಜ್ಞಾನದ ಪ್ರಕಾಶವನ್ನು ಬಿತ್ತಿ ಬೆಳಗೆಂದು ಕರುಣೆಯೊಳು ಕಾರುಣ್ಯವ ಬೀರಿ, ಈ ಒಡಲೆಂಬ ಬಂಡಿಗೆ ನೆಲೆ ಬೆಲೆಯನಿಟ್ಟು ಹರಸಿ ಹಾರೈಸಿ ಬೆಳೆಸಿದ ನನ್ನ ಮಹಾಗುರುಗಳ ಅಂತಿಮ ದರ್ಶನ ಮಾಡಿದೆ. ಗುರುಗಳೆದುರಿನಲ್ಲಿ ಕಣ್ಮುಚ್ಚಿ ಕೈಮುಗಿದು ನನ್ನಂತಹ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಕನಿಕರಿಸಿ ಕೈ ಹಿಡಿದು ನಡೆಸಿ ಎಲ್ಲಾ ಬಗೆಯ ಸುಖ ಸೌಭಾಗ್ಯಗಳನ್ನೂ ಕರುಣಿಸಿದ ಓ.. ಗುರುವೇ,,, ಈಗ ನಾನೇನು ನಿಮಗೆ ನೀಡಬಲ್ಲೆ ಎಂದು ಅಂತರಂಗಲ್ಲಿಯೇ ದುಃಖಿಸಿದೆ. ಈ ಸಂದರ್ಭದಲ್ಲಿ ನನ್ನ ಕಣ್ಣೀರನ್ನು ಬಿಟ್ಟರೆ ನಾನೇನೂ ಅರ್ಪಿಸಲಾಗಲಿಲ್ಲ. ಮಹಾ ಗುರುಗಳನ್ನೆ ಕಣ್ತುಂಬಿಕೊಂಡು ಭಾರವಾದ ಮನಸ್ಸಿನಿಂದಲೇ ಹಾಸನಕ್ಕೆ ಬಂದೆ..

ಇಹಲೋಕದಿಂದ ಮಹಾಗುರುಗಳು ಭೌತಿಕವಾಗಿ ನಮಗೆ ಕಾಣದಿರಬಹುದು. ಅವರು ಸಾಧಿಸಿರುವ, ನಿರ್ಮಿಸಿರುವ ಗುಡಿ ಗೋಪುರಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಅನಾಥರ ಕಂಗಳಲ್ಲಿ, ದೀನದಲಿತರ ಸಾರ್ಥಕ ಬದುಕಿನಲ್ಲಿ, ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರಲ್ಲಿ, ಶ್ರೀ ಮಠದ ಎಲ್ಲಾ ಪರಮಪೂಜ್ಯರ ಆದರ್ಶ ಬದುಕಿನಲ್ಲಿ ಇಂದಿಗೂ ನಮ್ಮ ಮಹಾಗುರುಗಳನ್ನು ಅನುಕ್ಷಣವೂ ಕಾಣುತ್ತಾ.. ಹಾಸನದ ಶ್ರೀ ಆದಿಚುಂಚನಗಿರಿ ಮಠದ ಪೂಜ್ಯ ಶ್ರೀ ಶ್ರೀ ಶಂಭುನಾಥ ಸ್ವಾಮೀಜಿಯವರ ಆಶ್ರಯದಲ್ಲಿದ್ದುಕೊಂಡು ಅತ್ಯಂತ ಶ್ರದ್ಧೆ, ಬದ್ಧತೆ ಹಾಗೂ ಪ್ರಾಮಾಣಿಕತೆಯಿಂದ ನಿಸ್ವಾರ್ಥ ಸೇವೆ ಮಾಡುವ ಅವಕಾಶ ದೊರಕಿದ್ದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ. ಇಂದು ನಮ್ಮ ಮಹಾಗುರುಗಳ 13ನೇ ವರ್ಷದ ಪುಣ್ಯಾರಾಧನೆ ಇಡೀ ನಾಡಿನಾದ್ಯಂತ ಅತ್ಯಂತ ಶ್ರದ್ಧೆ ಭಕ್ತಿಯಿಂದ ನೇರವೇರುತ್ತಿದೆ. ಮಹಾಗುರುಗಳಿಗೆ ಮತ್ತೊಮ್ಮೆ ಈ ಧರೆಗೆ ಅವತರಿಸಿರೆಂದು ಪ್ರಾರ್ಥಿಸುತ್ತಾ ಇದುವರೆವಿಗೂ ನಾನು ಮಾಡಿರುವ ಸೇವೆಯನ್ನು ಒಪ್ಪಿಕೊಂಡು ಆಶೀರ್ವದಿಸಿದ ಮಹಾಗುರುಗಳಿಗೆ ಹಾಗೂ ಪರಮಪೂಜ್ಯರಿಗೆ ನನ್ನ ಸದ್ಭಕ್ತಿಯ ಮನಃಪೂರ್ವಕ ನಮನಗಳನ್ನು ಅರ್ಪಿಸುತ್ತೇನೆ.

# ಇತಿಹಾಸದಲ್ಲಿ ಈ ದಿನ

## ಜನವರಿ-11

1922: ಮೊದಲ ಬಾರಿ ಇನ್ಸುಲಿನ್ ಔಷಧಿಯನ್ನು ಮನುಷ್ಯನ ಮೇಲೆ ಯಶಸ್ವಿಯಾಗಿ ಪ್ರಯೋಗಿಸಲಾಯಿತು. ಇದು ಮಧುಮೇಹ ಚಿಕಿತ್ಸೆಯಲ್ಲಿ ಕ್ರಾಂತಿಕಾರಿ ಬೆಳವಣಿಗೆಯಾಯಿತು.

1973: ಅಮೆರಿಕದ ಮೇಜರ್ ಲೀಗ್ ಬೇಸ್‌ಬಾಲ್‌ನಲ್ಲಿ ಡಿಸೈನೇಟೆಡ್ ಹಿಟ್ಟರ್ ನಿಯಮವನ್ನು ಅಧಿಕೃತವಾಗಿ ಅಂಗೀಕರಿಸಲಾಯಿತು.

2007: ಚೀನಾ ತನ್ನ ಮೊದಲ ಆಂಟಿಸ್ಯಾಟಲೈಟ್ ಕ್ಷಿಪಣಿ ಪರೀಕ್ಷೆ ನಡೆಸಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯಿತು.

2013: ಫ್ರಾನ್ಸ್ ತನ್ನ ಸೇನಾ ಪಡೆಗಳನ್ನು ಮಾಲಿಯಲ್ಲಿ ನಿಯೋಜಿಸಿ ಉಗ್ರಗಾಮಿ ಸಂಘಟನೆಗಳ ವಿರುದ್ಧ ಕಾರ್ಯಾಚರಣೆ ಆರಂಭಿಸಿತು.

1907: ಚಂದ್ರಶೇಖರ ವೆಂಕಟರಾಮನ್ (ಸಿ.ವಿ. ರಾಮನ್) ಅವರು 1930ರಲ್ಲಿ ಭೌತಶಾಸ್ತ್ರದಲ್ಲಿ ನೋಬೆಲ್ ಪ್ರಶಸ್ತಿ ಪಡೆದ ಮಹಾನ್ ವಿಜ್ಞಾನಿ

1932: ಅಮರ್ ಸಿಂಗ್ ಚೌಧರಿ, ಭಾರತೀಯ ಸೇನಾ ಅಧಿಕಾರಿ ಹಾಗೂ ವಾಯುಪಡೆ ಮುಖ್ಯಸ್ಥರಾಗಿದ್ದವರು.

### ಮರಣ

1966: ಭಾರತದ ಎರಡನೇ ಪ್ರಧಾನಮಂತ್ರಿ ಲಾಲ್ ಬಹಾದೂರ್ ಶಾಸ್ತ್ರಿ ಅವರು ತಾಷ್ಕೆಂಡ್‌ನಲ್ಲಿ ಅಕಾಲಿಕವಾಗಿ ನಿಧನರಾದರು. ಜೈ ಜವಾನ್-ಜೈ ಕಿಸಾನ್ ಘೋಷಣೆಯಿಂದ ಪ್ರಸಿದ್ಧರಾಗಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248